**ಓ ಎಸ್ 3/2025 ಪಿಡಬ್ಲ್ಯೂ1**

**ಸಾಕ್ಷಿಯನ್ನು ದಿಃ 09.03.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 3 ಮತ್ತು 4 ನೇ ಪ್ರತಿವಾದಿಗಳ ಪರ ಶ್ರೀ ಎಂ ಎಸ್ ಪಿ ವಕೀಲರಿಂದಃ**

ನಾನು ದ್ವಿತೀಯ ಪಿ ಯು ಸಿ ಓದಿದ್ದೇನೆ. ನನ್ನ ತಂದೆ ತಾಯಿಗೆ ನಾವು 3 ಜನ ಮಕ್ಕಳು ಎಂದರೆ ಸರಿ. ನಮ್ಮ 3 ಜನರಿಗೂ ಮದುವೆಯಾಗುವವರೆಗೂ ನಮ್ಮ ತಂದೆಯೇ ನಮ್ಮ ಪಾಲನೆ ಪೋಷಣೆ ಮಾಡಿದ್ದಾರೆ ಎಂದರೆ ಸರಿ. ನಮ್ಮ ತಂದೆಯು ಈಗಲೂ ಸಹ ಕುಟುಂಬದ ಯಜಮಾನರಾಗಿ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. ನಮ್ಮ ತಂದೆ ಯಾವುದೇ ವ್ಯವಹಾರ ಮಾಡಿದರೂ ನಮ್ಮ ಕುಟುಂಬದ ಒಳಿತಿಗಾಗಿ ಮಾಡುತ್ತಾರೆ ಎಂದರೆ ಸರಿ. ನಮ್ಮ ತಂದೆಯು ಯಾವುದೇ ವ್ಯವಹಾರ ಮಾಡಬೇಕಾದರೂ ಸಾಕಷ್ಟು ಯೋಚನೆ ಮಾಡಿ ಸ್ವಂತ ನಿರ್ಧಾರ ತೆಗೆದುಕೊಂಡು ವ್ಯವಹಾರ ಮಾಡುತ್ತಾರೆ ಎಂದರೆ ಸರಿ. ಅಂತಹ ಯಾವುದೇ ನಿರ್ಧಾರಗಳ ಕುರಿತಂತೆ ನನ್ನ ಹಾಗೂ ನನ್ನ ಸಹೋದರರ ತಕರಾರು ಇರುತ್ತಿರಲಿಲ್ಲ ಎಂದರೆ ಸರಿ. ನನ್ನ ಹಾಗೂ ನನ್ನ ತಂದೆ, ತಾಯಿ ಹಾಗೂ ಕೊನೆಯ ಸಹೋದರ ಶಶಿಕುಮಾರ್ ನಡುವೆ ಯಾವುದೇ ವಿಷಯಕ್ಕೂ ಯಾವುದೇ ತಕರಾರು ಮತ್ತು ಮನಸ್ತಾಪ ಇಲ್ಲದೆ ನಾವು ಅನ್ಯೋನ್ಯವಾಗಿದ್ದೇವೆ ಎಂದರೆ ಸರಿ. ನಮ್ಮ ತಂದೆಯವರ ಹೆಸರಿನಲ್ಲಿ ಸಾಕಷ್ಟು ಆಸ್ತಿಗಳು ಈಗಲೂ ಸಹ ಇವೆ ಎಂದರೆ ಸರಿ. ದಾವಾ ಷೆಡ್ಯೂಲ್ ಐಟಂ ನಂ.3 ರಿಂದ 7 ರವರೆಗಿನ ಆಸ್ತಿಗಳು ನಮ್ಮ ತಂದೆಯ ಹೆಸರಿನಲ್ಲಿ ಇವೆ ಎಂದರೆ ಸರಿ. ಆ ಆಸ್ತಿಗಳಲ್ಲಿ ತೆಂಗು, ಅಡಿಕೆ ಇತ್ಯಾದಿ ಆದಾಯದ ಬೆಳೆಗಳನ್ನು ಬೆಳೆಯುತ್ತೇವೆ ಎಂದರೆ ಸರಿ. ಅದರಿಂದ ಬರುವ ಆದಾಯವನ್ನು ನಮ್ಮ ತಂದೆಯೇ ನಿರ್ವಹಣೆ ಮಾಡುತ್ತಾರೆ ಎಂದರೆ ಸರಿ. ಕುಟುಂಬದ ಅವಶ್ಯಕತೆಗಾಗಿ ನಮ್ಮ ತಂದೆಯು ಯಾವುದೇ ಜಮೀನುಗಳನ್ನು ಮಾರಾಟ ಮಾಡುತ್ತಿದ್ದರು ಮತ್ತು ಖರೀದಿ ಮಾಡುತ್ತಿದ್ದರು ಎಂದರೆ

ಸರಿಯಲ್ಲ.

ಕೆ ಹೊಸೂರು ಗ್ರಾಮದಲ್ಲಿ ನನ್ನ ತಂದೆ, ತಾಯಿ ಮತ್ತು ಕಿರಿಯ ಸಹೋದರ ಶಶಿಕುಮಾರ್ ವಾಸ ಮಾಡುತ್ತಿರುವ ಮನೆ ಇದೆ ಎಂದರೆ ಸರಿ. ಆ ಮನೆಯ ವಿಸ್ತೀರ್ಣ ಸುಮಾರು 0.01 ಗುಂಟೆ ಇದೆ. ಆ ಮನೆಯನ್ನು ಈ ಕೇಸಿನಲ್ಲಿ ಸೇರಿಸಿಲ್ಲ ಎಂದರೆ ಸರಿ. ಆ ಮನೆ ನಮ್ಮ ಪಿತ್ರಾರ್ಜಿತ ಎಂದರೆ ಸರಿಯಲ್ಲ.

ಕೆ ಹೊಸೂರು ಗ್ರಾಮದ ಸರ್ವೆ ನಂ. 1/4 ರಲ್ಲಿ 0.03 ಗುಂಟೆ ಜಮೀನು 1 ನೇ ಪ್ರತಿವಾದಿ ಹೆಸರಿನಲ್ಲಿ ಇದೆ ಎಂದರೆ ಸರಿ. ಈಗ ನನಗೆ ತೋರಿಸಿದ ಸದರಿ ಆರ್ ಟಿ ಸಿ ಆಗಿದೆ ಎಂದರೆ ಸರಿ. ಸಾಕ್ಷಿ ಸದರಿ ದಾಖಲೆಯನ್ನು ಒಪ್ಪಿದ್ದರಿಂದ ನಿಶಾನೆ ಡಿ 1 ಎಂದು ಗುರುತಿಸಲಾಯಿತು. ಸದರಿ ಜಮೀನು ಖಾತೆಯು ಎಂ ಆರ್ ಸಂಖ್ಯೆ 1/97-98 ರ ರೀತ್ಯಾ ನಮ್ಮ ಪೂರ್ವಜರಿಂದ ನಮ್ಮ ತಂದೆಯ ಹೆಸರಿಗೆ ಖಾತೆಯಾಗಿದೆ ಎಂದರೆ ಸರಿ. ಸದರಿ 0.03 ಗುಂಟೆ ಜಮೀನನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ.

ದಾವಾ ಷೆಡ್ಯೂಲ್ ಐಟಂ ನಂ.1 ಮತ್ತು 2 ನ್ನು ನಮ್ಮ ತಂದೆ ಹಾಗೂ ಸಹೋದರರು ದಿನಾಂಕ 31.01.2005 ರಂದು ಇಂಗಲಗುಪ್ಪೆ ಗ್ರಾಮದ ರಮೇಶ ಬಿನ್ ಮರೀಗೌಡರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ಎರಡು ಆಸ್ತಿಗಳೂ ಎಂ ಆರ್ ಸಂಖ್ಯೆ 30/96-97 ರ ರೀತ್ಯಾ ನಮ್ಮ ತಂದೆಯ ಹಿಸ್ಸೆಗೆ ಬಂದಂತಹ ಆಸ್ತಿಗಳಾಗಿದ್ದವು ಎಂದರೆ ಸರಿ. ಹಾಗೆ ಬಂದ ಆಸ್ತಿಗಳನ್ನು ನಮ್ಮ ತಂದೆ ಹಾಗೂ ಸಹೋದರರು 2005 ರಲ್ಲಿ ಮಾರಾಟ ಮಾಡಿದ ಸಂಗತಿಯು ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಹಾಗೆ ಮಾರಾಟ ಮಾಡಿದ ನಂತರ ದಾವಾ ಷೆಡ್ಯೂಲ್ ಐಟಂ ನಂ.1 ಮತ್ತು 2 ರ ಕಂದಾಯ ದಾಖಲೆಗಳು ರಮೇಶ ಬಿನ್

ಮರೀಗೌಡರವರ ಹೆಸರಿಗೆ ವರ್ಗಾವಣೆಯಾದವು ಎಂಬುದು ನಿರ್ವಿವಾದ ಸಂಗತಿ ಎಂದರೆ ನನಗೆ ಗೊತ್ತಿಲ್ಲ.

ದಾವಾ ಷೆಡ್ಯೂಲ್ ಐಟಂ ನಂ.1 ರ ಆಸ್ತಿಯನ್ನು 08.04.2013 ರಲ್ಲಿ ನಮ್ಮ ತಂದೆಯು ರಮೇಶ ಬಿನ್ ಮರೀಗೌಡರಿಂದ ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ಐಟಂ ನಂ.1 ಉತ್ತರ ದಕ್ಷಿಣದಳೆಯಾಗಿ ಇದ್ದು ಪೂರ್ವ ಪಶ್ಚಿಮವಾಗಿ ಕೇವಲ 3 ರಿಂದ 4 ಅಡಿ ಅಗಲ ಇದೆ ಎಂದರೆ ಸರಿ. ದಾವಾ ಷೆಡ್ಯೂಲ್ ಐಟಂ ನಂ.1 ರ ಪೂರ್ವ ದಿಕ್ಕಿಗೆ ದಾವಾ ಷೆಡ್ಯೂಲ್ ಐಟಂ ನಂ. 2 ರ ಆಸ್ತಿ ಇದೆ ಎಂದರೆ ಸರಿ. ದಾವಾ ಷೆಡ್ಯೂಲ್ ಐಟಂ ನಂ.2 ನ್ನು ನಮ್ಮ ತಂದೆಯು ದಿನಾಂಕ 08.04.2013 ರಂದು ರಾಮೇಗೌಡರ ಹೆಂಡತಿ ಗೌರಮ್ಮ ಅವರ ಮಕ್ಕಳಾದ ವನಜಾಕ್ಷಿ, ಕೃಷ್ಣೇಗೌಡ, ಶೋಭಾ, ನರಸಿಂಹ ಹಾಗೂ ಸುನಂದರವರಿಂದ ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಸ್ವತ್ತು ರಾಮೇಗೌಡರ ಸ್ವಯಾರ್ಜಿತ ಆಸ್ತಿಯಾಗಿದ್ದು ಅವರ ಜೀವಿತ ಕಾಲದಲ್ಲಿ ಅದರ ಕಂದಾಯ ದಾಖಲೆಗಳು ಅವರ ಹೆಸರಿನಲ್ಲಿ ಇದ್ದವು ಎಂದರೆ ನನಗೆ ಗೊತ್ತಿಲ್ಲ. ರಾಮೇಗೌಡರ ಹೆಸರಿನಲ್ಲಿ ಇದ್ದ ಕಾರಣ ಅವರ ಮರಣಾ ನಂತರ ಯಾವುದೇ ತಕರಾರು ಇಲ್ಲದೆ ಅವರ ವಾರಸುದಾರರಾದ ಗೌರಮ್ಮ ಮತ್ತು ಮಕ್ಕಳ ಹೆಸರಿಗೆ ವರ್ಗಾವಣೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಹಾಗೆ ವರ್ಗಾವಣೆಯಾದ ಆಸ್ತಿಯಲ್ಲಿ ಗೌರಮ್ಮ ಮತ್ತು ಮಕ್ಕಳು ಕಂದಾಯ ಕಟ್ಟಿಕೊಂಡು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಹಾಗೆ ಇದ್ದಂತಹ ಆಸ್ತಿಯನ್ನು ನಮ್ಮ ತಂದೆಯು ದಿನಾಂಕ 08.04.2013 ರಂದು ಕ್ರಯಕ್ಕೆ ಪಡೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಯು ಆಸ್ತಿಯನ್ನು ಮಾರಾಟ ಮಾಡಿ ಅದೇ ಆಸ್ತಿಯನ್ನು ಪುನಃ ಕ್ರಯಕ್ಕೆ ಪಡೆದುಕೊಂಡಿರುವ ಸಂಬಂಧ ಕ್ರಯಪತ್ರಗಳನ್ನು ನಾನೇ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಪಿ 17 ರಲ್ಲಿನ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಹಾಗೆಯೇ ನಿಶಾನೆ ಪಿ 13

ನ್ನು ಸಹ ನಾನೇ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಆ ಕ್ರಯಪತ್ರಗಳಲ್ಲಿ ಹೆಸರಿಸಿರುವ ಗೌರಮ್ಮ, ವನಜಾಕಿ ಕೃಷ್ಣೇಗೌಡ, ಶೋಭಾ, ನರಸಿಂಹ, ಸುನಂದ ಇವರುಗಳನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ದಾವಾ ಷೆಡ್ಯೂಲ್ ಐಟಂ 1 ಮತ್ತು 2 ಕ್ಕೆ ಸಂಬಂಧಿಸಿದಂತೆ ಏನೇನು ವ್ಯವಹಾರಗಳು ಮತ್ತು ದಸ್ತಾವೇಜುಗಳ ಆಗಿವೆ ಎಂದು ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ಐಟಂ 2 ಬನುನ ದಿನಾಂಕ 21.02.2015 ರಂದು ನಮ್ಮ ತಂದೆ ಹಾಗೂ ತಾಯಿ ಇಬ್ಬರೂ ಸೇರಿ ಸರಿತಾ ಕೋಂ ಕೃಷ್ಣೇಗೌಡ ಎಂಬುವವರಿಗೆ ನನ್ನ ತಂದೆಯ ಸ್ವಯಾರ್ಜಿತ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಕ್ರಯದ ಆಧಾರದ ಮೇಲೆ ಆ ಆಸ್ತಿಯ ಹಕ್ಕು ಸೌಮ್ಯ ಸರಿತಾರವರಿಗೆ ಯಾವುದೇ ತಕರಾರು ಇಲ್ಲದೆ ವರ್ಗಾರ್ವಣೆಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನು ಸರಿತಾರವರು ತಮ್ಮ ಕುಟುಂಬದ ಅವಶ್ಯಕತೆಗಾಗಿ ಶಂಕರೇಗೌಡ ಬಿನ್ ಮಾಯೀಗೌಡ ಎಂಬುವರಿಗೆ ದಿನಾಂಕ 27.02.2017 ರಂದು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರದ ಆಧಾರದ ಮೇಲೆ ದಾವಾ ಷೆಡ್ಯೂಲ್ ಐಟಂ ನಂ.2 ರ ಮಾಲೀಕತ್ವ ಹಾಗೂ ಸ್ವಾಧೀನ ಸಹಿತ ಎಲ್ಲಾ ಕಂದಾಯ ದಾಖಲೆಗಳು ಯಾವುದೇ ತಕರಾರು ಇಲ್ಲದೆ ಶಂಕರೇಗೌಡ ಬಿನ್ ಮಾಯೀಗೌಡ ಎಂಬುವವರ ಹೆಸರಿಗೆ ವರ್ಗಾವಣೆಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನು 4 ನೇ ಪ್ರತಿವಾದಿ ರಶ್ಮಿ ಕೋಂ ರವಿಕುಮಾರ್ ಕೆ ಎನ್ ಕೆ ಆರ್ ಅಂದರೆ ನನ್ನ ಸಹೋದರನ ಹೆಂಡತಿಯು ದಿನಾಂಕ 20.02.2021 ಶಂಕರೇಗೌಡ ಬಿನ್ ಮಾಯೀಗೌಡ ರವರಿಂದ ಕ್ರಯಕ್ಕೆ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದಡಿ 4 ನೇ ಪ್ರತಿವಾದಿಯು ಶಂಕರೇಗೌಡ ಬಿನ್ ಮಾಯೀಗೌಡ ರವರಿಗೆ ರೂ. 1,50,000/- ಹಣವನ್ನು ಕ್ರಯದ ಪ್ರತಿಫಲವಾಗಿ ನೀಡಿ ಕ್ರಯಪತ್ರವನ್ನು ಬರೆಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದ ಆಧಾರದ ಮೇಲೆ ದಾವಾ ಷೆಡ್ಯೂಲ್ ಐಟಂ ನಂ.2 ರ ಎಲ್ಲಾ ಕಂದಾಯ ದಾಖಲೆಗಳು ಹಕ್ಕು ಸೌಮ್ಯದ ಪ್ರಯುಕ್ತ 4 ನೇ ಪ್ರತಿವಾದಿಗೆ

ವರ್ಗಾವಣೆಯಾಗಿ ಅವರ ಮಾಲೀಕತ್ವ ಮತ್ತು ಸ್ವಾಧೀನಾನುಭವದಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಷೆಡ್ಯೂಲ್ ಐಟಂ ನಂ.2 ರ ಪಶ್ಚಿಮಕ್ಕೆ ದಾವಾ ಷೆಡ್ಯೂಲ್ ಐಟಂ ನಂ.1 ರಲ್ಲಿರುವ 0.03 ಗುಂಟೆ ಜಮೀನು ಇದ್ದು ಆ ದಾವಾ ಷೆಡ್ಯೂಲ್ ಐಟಂ ನಂ.1 ಮತ್ತು 2 ನ್ನು ಯಾರಾದರೂ ಒಬ್ಬರು ವ್ಯವಸಾಯ ಮಾಡಲು ಅನುಕೂಲಕರವಾಗಿದೇ ಎಂದರೆ ಸರಿ. ನಿಶಾನೆ ಪಿ 11 ರ ಹಾಳೆ ಸಂಖ್ಯೆ 4 ರಲ್ಲಿರುವ ಮೊದಲ ಎರಡು ಪೋಟೋಗಳು ನನ್ನ ನಾದಿನಿ ರಶ್ಮಿಯದಾಗಿದ್ದು ಕೊನೆಯಲ್ಲಿರುವ ಪೋಟೋ ನನ್ನ ತಂದೆಯಾದ 1 ನೇ ಪ್ರತಿವಾದಿಯಾದಾಗಿದೆ ಎಂದರೆ ಸರಿ. ಅವರ ಪೋಟೋಗಳ ಮುಂದೆ ಇರುವ ಸಹಿಗಳು ಅವರಿಗೆ ಸೇರಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಸಾಕ್ಷಿಯು ಪೋಟೋಗಳನ್ನು ಗುರುತಿಸಿ ಒಪ್ಪಿದ್ದರಿಂದ ಅವುಗಳನ್ನು ನಿಶಾನೆ ಪಿ 11(ಎ), 11(ಎ1) ಮತ್ತು 11(ಬಿ) ಎಂದು ಗುರುತಿಸಲಾಯಿತು.

ದಿನಾಂಕ 08.04.2013 ರ ಕ್ರಯಪತ್ರ ಹಾಗೂ ದಿನಾಂಕ 09.04.2013 ರಂದು ನೋಂದಣಿಯಾಗಿದ್ದು ಆ ಮೂಲಕ 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾದ ದಾವಾ ಷೆಡ್ಯೂಲ್ ಐಟಂ ನಂ.1 ನ್ನು ದಿನಾಂಕ 20.02.2021 ರಂದು 1 ನೇ ಪ್ರತಿವಾದಿಯು 4 ನೇ ಪ್ರತಿವಾದಿಗೆ ದಾನಪತ್ರದ ಮೂಲಕ ವರ್ಗಾವಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಈ ಹಿಂದೆ ನೀಡಿದ್ದ ವಾಗ್ದಾನದ ಅನುಸಾರವೇ ತನ್ನ ಸೊಸೆಗೆ ದಾವಾ ಷೆಡ್ಯೂಲ್ ಐಟಂ ನಂ.1 ನ್ನು ದಾನವಾಗಿ ನೀಡುತ್ತಿದ್ದೇನೆ ಎಂದು ನನ್ನ ತಂದೆಯು ಸದರಿ ದಾನಪತ್ರದಲ್ಲಿ ಹೇಳಿದ್ದಾರೆ ಎಂದರೆ ಸರಿಯಲ್ಲ. ಹಾಗೆ ಹೇಳಿರುವ ದಾಖಲೆಯನ್ನು ನ್ಯಾಯಾಲಯಕ್ಕೆ ನಾನೇ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ದಾವಾ ಷೆಡ್ಯೂಲ್ ಐಟಂ ನಂ.1 ಮತ್ತು 2 ರ ಕಂದಾಯ ದಾಖಲೆಗಳು

4 ನೇ ಪ್ರತಿವಾದಿ ಹೆಸರಿಗೆ ಕ್ರಯಪತ್ರ ಹಾಗೂ ದಾನಪತ್ರದ ಆಧಾರದ ಮೇಲೆ ವರ್ಗಾವಣೆಯಾಗಿ ಅವರೇ ಅವುಗಳ ನಿರುಪಾಧಿಕ ಮಾಲೀಕರು ಮತ್ತು ಸ್ವಾಧೀನದಾರರಾಗಿ ಇದ್ದಾರೆ ಎಂದರೆ ಸರಿಯಲ್ಲ. 2005 ರಿಂದ ನಮ್ಮ ಕುಟುಂಬದಲ್ಲಿ ಆಗಿರುವ ಯಾವುದೇ ದಸ್ತಾವೇಜು ವ್ಯವಹಾರಗಳನ್ನು ನಮ್ಮ ಕುಟುಂಬದ ಯಾರೊಬ್ಬರೇ ಆಗಲೀ ಯಾವುದೇ ಪ್ರಾಧಿಕಾರದ ಮುಂದೆ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ನಮ್ಮ ತಂದೆಯು ಯಾವುದೇ ದಾಖಲೆ ಬರಸಬೇಕಾದರೆ ಬರಸಬೇಕಾದ ಸಂಗತಿಯ ಕುರಿತಂತೆ ಸಂಪೂರ್ಣ ಮಾಹಿತಿ ಪಡೆದುಕೊಂಡು ಆನಂತರ ದಾಖಲೆಯನ್ನು ಬರೆಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಶಾನೆ ಪಿ 23 ರಲ್ಲಿರುವ ಪಂಚಾಯಿತಿ ಪಾಲುಪಟ್ಟಿಗೆ ನಾನಾಗಲೀ, ನನ್ನ ತಂದೆ ತಾಯಿ ಮತ್ತು ಸಹೋದರರಾಗಲೀ ಪಕ್ಷಗಾರರಲ್ಲ ಎಂದರೆ ಸರಿ. ನಿಶಾನೆ ಪಿ 23 ರ ಹಾಳೆ 2, 3, 4 ರಲ್ಲಿ ಪದಗಳನ್ನು ತಿದ್ದಿ ಬರೆಯಲಾಗಿದೆ ಎಂದರೆ ಸರ್ವೆ ನಂಬರು ಮತ್ತು ವಿಸ್ತೀರ್ಣ ಅಳಿಸಿ ಹೋಗಿದ್ದ ಕಾರಣ ತಿದ್ದಿ ಬರೆಯಲಾಗಿದೆ. ನಿಶಾನೆ ಪಿ 23 ರಲ್ಲಿನ ಪಂಚಾಯಿತಿ ಪಾಲುಪಟ್ಟಿ ಯಲ್ಲಿ ಇರುವ ಸಂಗತಿಗಳನ್ನು ನಾನು ಅಷ್ಟಾಗಿ ಓದಿ ತಿಳಿದುಕೊಂಡಿಲ್ಲ. ಪಾಲುಪಟ್ಟಿಯಲ್ಲಿ ಎಲ್ಲೆಲ್ಲಿ ತಿದ್ದುಪಡಿಯಾಗಿದೆ ಎಂಬ ಬಗ್ಗೆ ಪಾಲುಪಟ್ಟಿಯ ಕೊನೆಯ ಹಾಳೆಯಲ್ಲಿ ಷರಾ ಬರೆದಿಲ್ಲ ಎಂದರೆ ಸರಿ. ಸದರಿ ಪಾಲುಪಟ್ಟಿಯ ಆಧಾರದ ಮೇಲೆ ನಮ್ಮ ಕುಟುಂಬದಲ್ಲಿ ಯಾವುದೇ ಕಂದಾಯ ದಾಖಲೆಗಳು ವರ್ಗಾವಣೆಯಾಗಿಲ್ಲ. ದಾವಾ ಷೆಡ್ಯೂಲ್ ಐಟಂ ನಂ.3 ರಿಂದ 7 ಹಾಗೂ ಸರ್ವೆ ನಂ. 1/4 ರ 0.03 ಗುಂಟೆ ಆಸ್ತಿಯಲ್ಲಿ ಮತ್ತು ನನ್ನ ತಂದೆ ತಾಯಿ ಹಾಗೂ ಕೊನೆಯ ಸಹೋದರ ವಾಸವಿರುವ ಮನೆಯಲ್ಲಿ ನಾನು ಹಾಗೂ ನನ್ನ ತಂದೆ ತಾಯಿ ಹಾಗೂ ಸಹೋದರ ಭಾಗ ಮಾಡಿಕೊಳ್ಳಲು ಯಾವುದೇ ತಕರಾರು ಇಲ್ಲ. ದಾವಾ ಷೆಡ್ಯೂಲ್ ಐಟಂ ನಂ.3 ರಿಂದ 7 ಹಾಗೂ ಸರ್ವೆ ನಂ. 1/4 ರ 0.03 ಗುಂಟೆ ಆಸ್ತಿಯಲ್ಲಿ ಮತ್ತು ನನ್ನ ತಂದೆ ತಾಯಿ ಹಾಗೂ ಕೊನೆಯ ಸಹೋದರ ವಾಸವಿರುವ ಮನೆಯಲ್ಲಿ ನನಗೆ ಈ ದಾವೆಯಲ್ಲಿ ಬರಬೇಕಾದ 1/4 ಭಾಗಾಂಶದ ಪ್ರಮಾಣ ಇದೆ ಎಂದರೆ ದಾವಾ

ಷೆಡ್ಯೂಲ್ ಐಟಂ ನಂ.1 ರಿಂದ 7 ರಲ್ಲಿನ ಆಸ್ತಿಗಳಲ್ಲಿ ಇದೆ. 4 ನೇ ಪ್ರತಿವಾದಿಯು ಕ್ರಯದ ಮೂಲಕ ಮತ್ತು ದಾನಪತ್ರದ ಮೂಲಕ ಪಡೆದಿರುವ ಆಸ್ತಿಯಲ್ಲಿ ನನಗೆ ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಈ ದಾವೆ ಹೂಡುವ ಮೊದಲು ನನ್ನ ತಂದೆ, ತಾಯಿ ಹಾಗೂ ಸಹೋದರರಿಗೆ ನೋಟೀಸು ನೀಡಿ ಭಾಗ ಕೊಡಿ ಎಂದು ನೋಟೀಸು ನೀಡಿಲ್ಲ, ಆದರೆ ಬಾಯಿ ಮಾತಿನ ಮೂಲಕ ಕೇಳಿದ್ದೆ. ದಾವಾ ಷೆಡ್ಯೂಲ್ ಐಟಂ ನಂ.1 ಮತ್ತು 2 ಸ್ವತ್ತುಗಳು 2005 ರ ಕಾಲಕ್ಕೆ ನಮ್ಮ ಒಟ್ಟು ಕುಟುಂಬದ ವ್ಯವಹಾರದಿಂದ ಬೇರ್ಪಟ್ಟಿತ್ತು ಎಂದರೆ ಸರಿಯಲ್ಲ. ಹಾಗೆ ಬೇರ್ಪಟ್ಟಿರುವುದನ್ನು ತೋರಿಸುವಂತಹ ದಾಖಲೆಗಳಲ್ಲಿ ಇರುವ ಪಕ್ಷಗಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನನ್ನ ಹಾಗೂ ನನ್ನ ತಂದೆ ತಾಯಿ ಮತ್ತು 3 ಮತ್ತು 4 ನೇ ಪ್ರತಿವಾದಿಗಳ ನಡುವೆ 2025 ರಿಂದ ಕೌಟುಂಬಿಕ ಭಿನ್ನಾಭಿಪ್ರಾಯ ಉಂಟಾಗಿದೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ಹಾಗೂ 3 ಮತ್ತು 4 ನೇ ಪ್ರತಿವಾದಿಗಳ ನಡುವೆ ಹೊಂದಾಣಿಕೆ ಇಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಐಟಂ ನಂ. 1 ಮತ್ತು 2 ರಲ್ಲಿರುವ ತೆಂಗಿನ ಮರಗಳಲ್ಲಿ ನನ್ನ ತಂದೆ, ತಾಯಿ, ನಾನು ಹಾಗೂ ನನ್ನ ಕೊನೆ ಸಹೋದರ ಸೇರಿ ಅನಧಿಕೃತವಾಗಿ ಎಳನೀರು ಕಡಿದಿದ್ದೇವೆ ಎಂದು ಹೇಳಿ 4 ನೇ ಪ್ರತಿವಾದಿಯು ಪಾಂಡವಪುರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು ಎಂದರೆ ಸರಿಯಲ್ಲ. ಹಾಗೆ ದೂರುನೀಡಿದಾಗ ನಾವೆಲ್ಲರೂ ಹೋಗಿ 4 ನೇ ಪ್ರತಿವಾದಿಯ ಜಮೀನಿನಲ್ಲಿ ಮತ್ತೊಮ್ಮೆ ಹಾಗೆ ಮಾಡುವುದಿಲ್ಲ ಎಂದು ಮುಚ್ಚಳಿಕೆ ಬರೆದುಕೊಟ್ಟಿದ್ದೇವೆ ಎಂದರೆ ಆ ರೀತಿ ಬರೆದುಕೊಟ್ಟಿಲ್ಲ ಮಾತನಾಡಿದ್ದೇವೆ. ಪ್ರಕರಣವು ಸಿವಿಲ್ ಸ್ವರೂಪವಾಗಿರುವುದರಿಂದ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ಹೇಳಿ ಪೊಲೀಸರು ಹಿಂಬರಹ ನೀಡಿ ತಿಳುವಳಿಕೆ ನೀಡಿ ಹೇಳಿ ಕಳುಹಿಸಿದ್ದರು ಎಂದರೆ ಸರಿಯಲ್ಲ. ಆನಂತರ ನಾನು ನನ್ನ ತಂದೆ ತಾಯಿ ಹಾಗೂ ಕೊನೆಯ ಸಹೋದರ ಸೇರಿ ಈ ದಾವೆಯನ್ನು ಹಾಕಿದ್ದೇವೆ ಎಂದರೆ ಸರಿಯಲ್ಲ. 3 ಮತ್ತು 4 ನೇ ಪ್ರತಿವಾದಿಗಳಿಗೆ ಕಿರುಕುಳ ನೀಡುವ ಉದ್ದೇಶದಿಂದ ನಮ್ಮ ಕುಟುಂಬದ 2 ಆಸ್ತಿಗಳನ್ನು

ಸೇರಿಸದೆ ಈ ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**